**ಸಹಕಾರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
**ಹಾಗೂ ಪ್ರಜಾವಾಣಿ**


ಎಸ್‌ಪಿವಿಜಿಎಂಸಿ
ಟ್ರಸ್ಟ್ (ರಿ)
8ನೇ ಕ್ರಾಸ್
ವಿ.ವಿ. ಮೊಹಲ್ಲಾ
ಮೈಸೂರು


## Main Donors

1 S.R Kumuda Charitable Trust, Mysore
2 Smt. Vanamala , Mysore
3 Smt. Suruma Bhai & Shanthabai
4 Sri C.S. Rajan, Mysore

## Main Sponsorors

Dr. Ramabai Charitable Foundation, Mysore
Canara Bank, Mysore
K.R.Vaidyanathan, Mysore
Sri Girish Nathan , Chennai
Geetha Shishu Shikshana Sangha,Mysore
Koog-u- Foundation Mysore

Karnataka Bank 100
SPVGMC TRUST
spvgmctrust@kbl
BHIM UPI

## Our Bank Details :

Trust Name : SPVGMC Trust ®
Account # 5052500100501601
Bank Name : Karnataka Bank
IFSC Code : KARB0000505
Branch Name ; V.V.Mohalla, Mysuru

*All donations made to `SPVGMC Trust ® are exempted from 80G of Income Tax Act.*


Email
spvgmctrust@gmail.com

website
www.8thcrossganesha.org

Phone: 9845501178, 9902281006




ಸೆಪ್ಟೆಂಬರ್
ಶನಿವಾರ
7
September
Saturday

## 63ರ ಸಂಭ್ರಮದಲ್ಲಿ

ಸಂಜೆ 6.45ಕ್ಕೆ – ಹರಿಕಥೆ
6:45 P.M. -Harikathe

ಡಾ. ಮಾಲಿನಿ ಮತ್ತು ತಂಡ – ಹರಿಕಥೆ
ವಿದ್ವಾನ್ ಎ. ಉದಯರಾಜು – ಹಾರ್ಮೋನಿಯಂ
ವಿದ್ವಾನ್ ಎಂ.ಆರ್. ಶ್ರೀಕಂಠ – ತಬಲ

Dr. V. Malini and Party – Harikatha
Vid A. Udayraju - Harmonium
Vid M. R. Sreekanta - Tabla

ಸೆಪ್ಟೆಂಬರ್
ಭಾನುವಾರ
8
September
Sunday

## ಸಂಜೆ 6 ಗಂಟೆಗೆ 63ನೇ ಪಾರಂಪರಿಕ ಸಂಗೀತೋತ್ಸವದ ಉದ್ಘಾಟನಾ ಸಮಾರಂಭ

ಸಂಜೆ 6.45ಕ್ಕೆ ಗಾಯನ/6:45 P.M.Vocal

ವಿದುಷಿ ಸೂರ್ಯಗಾಯತ್ರಿ – ಗಾಯನ
ವಿದ್ವಾನ್ ಆದರ್ಶ ಅಜಯಕುಮಾರ್ – ವಯೋಲಿನ್
ವಿದ್ವಾನ್ ಕೃಪಾಲ್ ಸಾಯಿರಾಂ – ಮೃದಂಗ
ವಿದ್ವಾನ್ ಪ್ರಶಾಂತ್ ಶಂಕರ್ – ತಬಲಾ
ವಿದ್ವಾನ್ ಶೈಲೇಶ್ ಮರಾರ್ – ಹೆಚ್ಚುವರಿ ತಾಳವಾದ್ಯ
Vid Soorya Gayatri -Vocal
Vid Adarsh Ajaykumar -Violin
Vid Kripal Sai Ram -Mridangam
Vid Prasanth Sankar-Tabla
Vid Sailesh Marar- Extra Percussion





**ಡಾ ಮಾಲಿನಿ**

ಡಾ ಮಾಲಿನಿಯವರು ಸಂಗೀತ ಕುಟುಂಬಕ್ಕೆ. ತಾಯಿ ಲಲಿತಮ್ಮನವರಿಂದ ಸಂಗೀತ ಕಲಿಕೆಯ ಪ್ರಾರಂಭ. ನಂತರ ವಿದ್ವಾನ್ ಎಸ್ ಮಹದೇವಪ್ಪನವರಲ್ಲಿ ಮುಂದುವರಿಕೆ. ಇದರ ಜೊತೆಗೆ ವಿದ್ವಾಂಸರಾದ ರಾಜಂ ಅಯ್ಯರ್, ಮಧುರೈ ಶೇಷಗೋಪಾಲನ್, ಲಾಲ್‌ಗುಡಿ ಜಯರಾಮನ್ ಅವರ ಸಂಗೀತ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದು ಇವರ ಕಲಿಕೆಗೆ ಮತ್ತಷ್ಟು ಸೇರ್ಪಡೆಯಾಯಿತು. ನಂತರ ವಿದ್ವಾಂಸರಾದ ಗುರುರಾಜುಲು ನಾಯ್ಡು, ಅಚ್ಯುತ ಪೈ, ರಂಗಸ್ವಾಮಿ ಇವರಲ್ಲಿ ಹರಿಕಥೆಯಲ್ಲಿ ತರಬೇತಿ. ಸುಮಾರು 30,000ಕ್ಕೂ ಹೆಚ್ಚು ಹರಿಕಥಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿರುವ ಇವರು ಆಕಾಶವಾಣಿಯ ಬಿ ಹೈ ಕಲಾವಿದರು. ಇವರು ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ಸನ್ಮಾನಿತರು ಹಾಗೂ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರು.

**ವಿದುಷಿ ಸೂರ್ಯಗಾಯತ್ರಿ**

ವಿದುಷಿ ಸೂರ್ಯ ಗಾಯತ್ರಿ ಬಾಲಪ್ರತಿಭೆ. ಇವರ ತಂದೆ ಪಿ ವಿ ಅನಿಲ್ ಕುಮಾರ್ ಒಳ್ಳೆಯ ಮೃದಂಗವಾದಕರು. ತಾಯಿ ಕವಯತ್ರಿ. ಅಸಾಧಾರಣ ಶಾರೀರವಿರುವ ಸೂರ್ಯಗಾಯತ್ರಿ ವಿದುಷಿ ಆನಂದಿ ಮತ್ತು ವಿದ್ವಾನ್ ನಿಶಾಂತ್ ಅವರ ಶಿಷ್ಯರು. ಇವರ ಮತ್ತೊಬ್ಬರು ಗುರುಗಳು ವಿದ್ವಾನ್ ಕುಲದೀಪ್ ಎಂ ಪೈ. ಇವರ ಭಾವಪೂರ್ಣ ಪ್ರಸ್ತುತಿಯಿಂದಾಗಿ ಇವರನ್ನು ಎಂ ಎಸ್ ಸುಬ್ಬುಲಕ್ಷ್ಮಿಯವರಿಗೆ ಹೋಲಿಸುತ್ತಾರೆ. 10ರ ಹರೆಯದಲ್ಲೇ ಮುಂಬೈ ಷಣ್ಮುಗಾನಂದ ಸಭೆಯ ಎಂ ಎಸ್ ಸುಬ್ಬುಲಕ್ಷ್ಮೀ ಫೆಲೋಷಿಪ್ ಪಡೆದ ಟ್ರವೇಂಡ್ರಂ ಕಲಾನಿಧಿ ಸಂಗೀತ ರತ್ನ ಪ್ರಶಸ್ತಿ, ಸಮಾಜ ಶಕ್ತಿ ಪ್ರಶಸ್ತಿ ಮುಂತಾದವುಗಳಿಗೆ ಭಾಜನರಾಗಿದ್ದಾರೆ. ವಂದೇ ಗುರುಪರಂಪರಂ ಎನ್ನುವ ಇವರ ಗಾಯನ ಸರಣಿ ತುಂಬಾ ಪ್ರಸಿದ್ಧಿ ಪಡೆದಿದೆ. ಯೂಟ್ಯೂಬಿನಲ್ಲಿ ಇವರ ಗಾಯನಕ್ಕೆ 150 ಮಿಲಿಯನ್ ನೋಡುಗರಿದ್ದಾರೆ. ಇವರಿಗೆ ವಿದ್ವಾನ್ ಆದರ್ಶ ಅಜಯ್‌ಕುಮಾರ್ ಅವರು ವಯೋಲಿನ್ನಿನಲ್ಲಿ, ವಿದ್ವಾನ್ ಕೃಪಾಲ್ ಸಾಯಿರಾಂ ಮೃದಂಗದಲ್ಲಿ, ವಿದ್ವಾನ್ ಪ್ರಶಾಂತ್ ಶಂಕರ್ ತಬಲಾದಲ್ಲಿ ಮತ್ತು ವಿದ್ವಾನ್ ಶೈಲೇಶ್ ಮರಾರ್ ಹೆಚ್ಚುವರಿ ತಾಳವಾದ್ಯದಲ್ಲಿ ಸಹಕರಿಸಲಿದ್ದಾರೆ.

ಸೆಪ್ಟೆಂಬರ್
ಸೋಮವಾರ

# 9

September
Monday

**ಗಮಕ ಸಂಜೆ 5.30 ರಿಂದ 6.45**
**ಕಾವ್ಯ : ಗಣೇಶ ಪುರಾಣ**
**ವಾಚನ: ವಿದುಷಿ ಶುಭಾ ರಾಘವೇಂದ್ರ : ವ್ಯಾಖ್ಯಾನ : ಶ್ರೀ ಎ. ನಿರಂಜನ**

ಸಂಜೆ 6.45ಕ್ಕೆ ಗಾಯನ/6:45 P.M. Vocal

ವಿದ್ವಾನ್ ತಿರುವಾರೂರು ಗಿರೀಶ್ – ಗಾಯನ
ವಿದ್ವಾನ್ ಆರ್ ಕೆ ಶ್ರೀರಾಂಕುಮಾರ್ – ವಯೋಲಿನ್
ವಿದ್ವಾನ್ ತಿರುವಾರೂರು ಭಕ್ತವತ್ಸಲ – ಮೃದಂಗ
ವಿದ್ವಾನ್ ವ್ಯಾಸವಿಠಲ – ಖಂಜಿರಾ

Vid Thiruvarur Girish - Vocal
Vid R.K.Shriram kumar - Violin
Vid Thiruvarur Bhaktavatsala - Mridangam
Vid Vyasa Vittala – Khanjira



## ವಿದ್ವಾನ್ ತಿರುವಾರೂರು ಗಿರೀಶ್

ವಿದ್ವಾನ್ ತಿರುವಾರೂರು ಗಿರೀಶ್ ವಿಶ್ವವಿಖ್ಯಾತ ವಿದುಷಿ ಟಿ ಧನಮ್ಮಾಳ್ ಅವರ ಕುಟುಂಬದ ಕುಡಿ, ವಿದುಷಿ ಟಿ ಬೃಂದಾ ಅವರ ಮೊಮ್ಮಗ. ಹಲವು ತಲೆಮಾರುಗಳಿಂದ ಕುಟುಂಬದಲ್ಲಿ ಸಂಗೀತ ನೃತ್ಯಗಳ ಪ್ರವಾಹವೇ ಹರಿದಿದೆ. ಬಾಲಪ್ರತಿಭೆಯಾಗಿ ಸಂಗೀತಕ್ಷೇತ್ರಕ್ಕೆ ಬಂದ ಗಿರೀಶ್ ಅವರಿಗೆ ಅಜ್ಜಿ ವಿದುಷಿ, ಸಂಗೀತ ಕಲಾನಿಧಿ ಟಿ ಬೃಂದಾ ಅವರೇ ಗುರುಗಳು. ಅಪ್ಪಟ ಅಭಿಜಾತ ಸಂಗೀತದ ಪ್ರತಿನಿಧಿಯಾಗಿ ಗಿರೀಶ್ ಅವರು ತಮ್ಮ ಸಂಗೀತದ ಅಭಿಜಾತತೆಗೆ ಹೆಸರಾದವರು. ಪದಂ ಮತ್ತು ಜಾವಳಿಯ ಪ್ರಸ್ತುತಿಯಲ್ಲಿ ಇವರದು ಎತ್ತಿದ ಕೈ. ಭಾರತ ಹಾಗೂ ವಿದೇಶಗಳಲ್ಲಿ ತಮ್ಮ ಗಾಯನವವನ್ನು ಗಿರೀಶ್ ಪ್ರಸ್ತುತ ಪಡಿಸಿದ್ದಾರೆ. ಕಂಚಿ ಕಾಮಕೋಟಿ ಪೀಠದ ಆಸ್ಥಾನ ವಿದ್ವಾಂಸರಾಗಿದ್ದ ಗಿರೀಶ್ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದರೆ. ಇವರಿಗೆ ವಯೋಲಿನ್ನಿನಲ್ಲಿ ವಿದ್ವಾನ್ ಆರ್ ಕೆ ಶ್ರೀರಾಂಕುಮಾರ್, ಮೃದಂಗದಲ್ಲಿ ವಿದ್ವಾನ್ ತಿರುವಾರೂರು ಭಕ್ತವತ್ಸಲಂ ಮತ್ತು ಖಂಜಿರಾದಲ್ಲಿ ವಿದ್ವಾನ್ ವ್ಯಾಸ ವಿಠಲ ಸಹಕರಿಸಲಿದ್ದಾರೆ.

ಸೆಪ್ಟೆಂಬರ್
ಮಂಗಳವಾರ

# 10

September
Tuesday

**ಗಮಕ ಸಂಜೆ 5.30 ರಿಂದ 6.45**
**ಕಾವ್ಯ : ದೇವೀ ಭಾಗವತ**
**ವಾಚನ: ವಿದುಷಿ ಧರಿತ್ರೀ ಆನಂದರಾವ್ : ವ್ಯಾಖ್ಯಾನ : ಡಾ.ಎನ್.ಕೆ.ರಾಮಶೇಷನ್**

**ಸಂಜೆ 6.45ಕ್ಕೆ ಗಾಯನ/6:45 P.M.Vocal**

ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ – ಗಾಯನ
ವಿದ್ವಾನ್ ಕಾರ್ತಿಕ್ ನಾಗರಾಜ್ – ವಯೋಲಿನ್
ವಿದ್ವಾನ್ ತಿರುವಾರೂರು ಭಕ್ತವತ್ಸಲ – ಮೃದಂಗ
ವಿದ್ವಾನ್ ಅರುಣ್ ಕುಮಾರ್ – ರಿದಂಪ್ಯಾಡ್

Vid. Harish Sivaramakrishnan - Vocal
Vid Karthik Nagaraj - Violin
Vid Thiruvarur Bhaktavatsala - Mridangam
Vid Arun Kumar – Rhythmpad



## ವಿದ್ವಾನ್ ಹರೀಶ್ ಶಿವರಾಮಕೃಷ್ಣನ್

ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಬಹುಮುಖ ಪ್ರತಿಭೆಯ ಕಲಾವಿದರು. ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕರು, ಚಲನಚಿತ್ರ ಹಿನ್ನೆಲೆ ಗಾಯಕರು, ಪ್ರಖ್ಯಾತ ಆಗಮ್ ಬ್ಯಾಂಡ್‌ನ ಗಾಯಕರು, ಕೆಮಿಕಲ್ ಇಂಜಿನಿಯರಿಂಗ್ ಪದವೀಧರರು. ಗೂಗಲ್ ಮತ್ತು ಅಡೋಬ್ ಸಂಸ್ಥೆಗಳಿಗಾಗಿ ಮುಖ್ಯ ವಿನ್ಯಾಸಕಾರರಾಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಗಾಯನ ಪ್ರಸ್ತುತ ಪಡಿಸಿದ್ದಾರೆ. ತಮಿಳು ಚಲನಚಿತ್ರ ಸೂರಾರಿ ಪೊಟ್ರುವಿನ ವೆಯ್ಯಂ ಸಲ್ಲಿ ಎಂಬ ಗೀತೆಯ ಗಾಯನಕ್ಕಾಗಿ ಸೌತ್ ಇಂಡಿಯನ್ ಇಂಟರ್‌ನ್ಯಾಷನಲ್ ಮೂವಿ ಅವಾರ್ಡ್ ಕೊಡಮಾಡುವ ಅತ್ಯುತ್ತಮ ಪುರುಷ ಗಾಯಕನಿಗೆ ಸಲ್ಲುವ ಪ್ರಶಸ್ತಿ ಇವರಿಗೆ ಸಂದಿದೆ.
ಇವರಿಗೆ ವಯೋಲಿನ್ನಿನಲ್ಲಿ ವಿದ್ವಾನ್ ಕಾರ್ತಿಕ್ ನಾಗರಾಜ್, ಮೃದಂಗದಲ್ಲಿ ವಿದ್ವಾನ್ ತಿರುವಾರೂರು ಭಕ್ತವತ್ಸಲ ಮತ್ತು ರಿದಂಪ್ಯಾಡ್‌ನಲ್ಲಿ ವಿದ್ವಾನ್ ಅರುಣ್‌ಕುಮಾರ್ ಸಹಕರಿಸಲಿದ್ದಾರೆ.

ಸೆಪ್ಟೆಂಬರ್
ಬುಧವಾರ

# 11

September
Wednesday

ಗಮಕ ಸಂಜೆ 5.30 ರಿಂದ 6.30
ಕಾವ್ಯ : ಆದಿ ಪುರಾಣ – ಭರತ ಬಾಹುಬಲಿ ಯುದ್ಧ
ವಾಚನ: ವಿದ್ವಾನ್ ಸುಹಾಸ್ ಭಾರದ್ವಾಜ್ : ವ್ಯಾಖ್ಯಾನ : ಡಾ. ಜ್ಯೋತಿಶಂಕರ್
ಸಂಜೆ 6.45ಕ್ಕೆ ಗಾಯನ /6:45 P.M. Vocal

ವಿದ್ವಾನ್ ವಿಘ್ನೇಶ್ ಈಶ್ವರ್ – ಗಾಯನ
ವಿದ್ವಾನ್ ಸಾಯಿ ರಕ್ಷಿತ್ – ವಯೋಲಿನ್
ವಿದ್ವಾನ್ ಕೆ ಯು ಜಯಚಂದ್ರ ರಾವ್ – ಮೃದಂಗ
ವಿದ್ವಾನ್ ಬಿ ಎಸ್ ಪುರುಷೋತ್ತಮ್ – ಖಂಜಿರಾ

**Vid Vignesh Eswar – Vocal**
**Vid Sai Rakshit - Violin**
**Vid Jayachandra Rao K. U - Mridangam**
**Vid B.S.Purushotham – Khanjira**



**ವಿದ್ವಾನ್ ವಿಘ್ನೇಶ್ ಈಶ್ವರ್**

ವಿದ್ವಾನ್ ವಿಘ್ನೇಶ್ ಈಶ್ವರ್ ಸೌಂಡ್ ಇಂಜಿನಿಯರಿಂಗ್ ಪದವೀಧರರು. ವಿದ್ವಾನ್ ಪಾಲಕ್ಕಾಡ್ ಅನಂತರಾಮ ಭಾಗವತರ್ ಅವರಲ್ಲಿ ಕಲಿತು ನಂತರ ಈಗ ವಿದ್ವಾನ್ ಟಿ ಎಂ ಕೃಷ್ಣ ಅವರಲ್ಲಿ ಕಲಿಕೆ ಮುಂದುವರಿಸುತ್ತಿದ್ದಾರೆ. ಶ್ರೀಮಂತ ಕಂಠದ ಒಡೆಯರಾದ ವಿಘ್ನೇಶ್ ಇಂದು ಬಹು ಬೇಡಿಕೆಯಲ್ಲಿರುವ ಕಲಾವಿದರು. ಎಲ್ಲಾ ಪ್ರತಿಷ್ಠಿತ ವೇದಿಕೆಗಳಲ್ಲಿಯೂ ಕಾರ್ಯಕ್ರಮ ನೀಡಿದ್ದಾರೆ. ಸಂಗೀತ ಹಾಗೂ ಕಂಪ್ಯೂಟರ್‌ಗೆ ಸಂಬಂಧಿಸಿದಂತೆ ಗಂಭೀರವಾದ ಸಂಶೋಧನೆ ಮಾಡುತ್ತಿದ್ದಾರೆ. ತಮಿಳು ಸಿನಿಮಾಗಳಲ್ಲಿ ಕಲಾನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರಿಗೆ ವಯೋಲಿನ್ನಿನಲ್ಲಿ ವಿದ್ವಾನ್ ಸಾಯಿ ರಕ್ಷಿತ್, ಮೃದಂಗದಲ್ಲಿ ವಿದ್ವಾನ್ ಕೆ.ಯು. ಜಯಚಂದ್ರ ರಾವ್ ಖಂಜಿರಾದಲ್ಲಿ ವಿದ್ವಾನ್ ಬಿ ಎಸ್ ಪುರುಷೋತ್ತಮ್ ಸಹಕರಿಸುತ್ತಿದ್ದಾರೆ.

ಸೆಪ್ಟೆಂಬರ್
ಗುರುವಾರ

# 12

September
Thursday

ಗಮಕ: ಸಂಜೆ 5.30 ರಿಂದ 6.30
ಕಾವ್ಯ : ಶ್ರೀ ದತ್ತ ಭಾಗವತ ವಾಚನ: ವಿದುಷಿ ವಸಂತ ವೆಂಕಟೇಶ್
ವ್ಯಾಖ್ಯಾನ : ವಿದುಷಿ ಧರಿತ್ರೀ ಆನಂದರಾವ್
ಸಂಜೆ 6.45ಕ್ಕೆ ಗಾಯನ/6:45 P.M. Vocal

ವಿದ್ವಾನ್ ಕಲ್ಯಾಣಪುರಂ ಎಸ್ ಅರವಿಂದ್ – ಗಾಯನ
ವಿದ್ವಾನ್ ಎಚ್ ಎನ್ ಭಾಸ್ಕರ್ – ವಯೋಲಿನ್
ವಿದ್ವಾನ್ ಕೆ ಯು ಜಯಚಂದ್ರ ರಾವ್ – ಮೃದಂಗ
ವಿದ್ವಾನ್ ಬಿಎಸ್ ಪುರುಷೋತ್ತಮ್ – ಖಂಜಿರಾ

**Vid Kalyanapuram S Aravind – Vocal**
**Vid H.N. Bhaskar - Violin**
**Vid Jayachandra Rao K. U - Mridangam**
**Vid B.S. Purushotham – Khanjira**



**ವಿದ್ವಾನ್ ಕಲ್ಯಾಣಪುರಂ ಎಸ್ ಅರವಿಂದ್**

ವಿದ್ವಾನ್ ಕಲ್ಯಾಣಪುರಂ ಎಸ್ ಅರವಿಂದ್ ಈ ತಲೆಮಾರಿನ ಅತ್ಯಂತ ಬೇಡಿಕೆಯಲ್ಲಿರುವ ಯುವ ಕಲಾವಿದ. ವಿದ್ವಾನ್ ಸಂಗೀತ ಕಲಾನಿಧಿ ಟಿ ಎನ್ ಶೇಷಗೋಪಾಲನ್ ಅವರ ಶಿಷ್ಯರಾದ ಅರವಿಂದ್ ತಮ್ಮ 23ನೇ ಹರೆಯದಲ್ಲಿ ಸಂಗೀತಕ್ಕೆ ವೃತ್ತಿಪರರಾಗಿ ಕಾಲಿಟ್ಟರು. ಇಂದು ತಮ್ಮ ತ್ರಿಸ್ಥಾಯಿಯಲ್ಲಿ ಸಂಚರಿಸುವ ಕಂಠ, ಶ್ರುತಿಶುದ್ಧತೆ, ಭಾವಭರಿತ ಪ್ರಸ್ತುತಿಗೆ ಹೆಸರಾಗಿದ್ದಾರೆ. ವೃತ್ತಿಯಿಂದ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದ ಅರವಿಂದ್ ಇಂದು ಅದಕ್ಕೆ ವಿದಾಯ ಹೇಳಿ ಪೂರ್ಣಪ್ರಮಾಣದಲ್ಲಿ ಸಂಗೀತಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಇಂದು ಶೇಷಗೋಪಾಲನ್ ಅವರ ಬಾನಿಯ ಅಧಿಕೃತ ಪ್ರತಿನಿಧಿ ಎನಿಸಿಕೊಂಡಿದ್ದಾರೆ. ಇವರಿಗೆ ವಯೋಲಿನ್ನಿನಲ್ಲಿ ವಿದ್ವಾನ್ ಎಚ್.ಎನ್. ಭಾಸ್ಕರ್, ಮೃದಂಗದಲ್ಲಿ ವಿದ್ವಾನ್ ಕೆ.ಯು. ಜಯಚಂದ್ರರಾವ್, ಖಂಜಿರಾದಲ್ಲಿ ವಿದ್ವಾನ್ ಬಿ ಎಸ್ ಪುರುಷೋತ್ತಮ್ ಸಹಕರಿಸುತ್ತಿದ್ದಾರೆ.

ಸೆಪ್ಟೆಂಬರ್
ಶುಕ್ರವಾರ
13
September
Friday

ಗಮಕ: ಸಂಜೆ 5.30 ರಿಂದ 6.30
ಕಾವ್ಯ : ಕಾಳಿದಾಸ ಮಹಾಕವಿಯ ರಘುವಂಶ
ವಾಚನ: ವಿದುಷಿ ಮಹಿಮಾ ಕಶ್ಯಪ್ : ವ್ಯಾಖ್ಯಾನ : ಡಾ.ಹೆಚ್.ವಿ.ನಾಗರಾಜರಾವ್

ಸಂಜೆ 6.45ಕ್ಕೆ ಗಾಯನ /6:45 P.M. Vocal

ವಿದುಷಿ ಸ್ಫೂರ್ತಿ ರಾವ್ – ಗಾಯನ
ವಿದುಷಿ ಹೆಚ್.ಎನ್. ಭಾಸ್ಕರ್ – ವಯೋಲಿನ್
ವಿದ್ವಾನ್ ಅದಮ್ಯ ರಾಮಾನಂದ – ಮೃದಂಗ
ವಿದ್ವಾನ್ ಶಮಿತ್ ಗೌಡ – ಘಟ

**Vid Spoorthi Rao - Vocal**
**Vid H. N. Bhaskar - Violin**
**Vid Adamya Ramanand - Mridangam**
**Vid Shamit Gowda – Ghatam**

ಸೆಪ್ಟೆಂಬರ್
ಶನಿವಾರ
14
September
Saturday

ಬೆಳಗ್ಗೆ 10 ಗಂಟೆಗೆ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ
ಗಮಕ ಸಂಜೆ 5.30 ರಿಂದ 6.45
ಕಾವ್ಯ : ಮಾರುತಿ ಭಕ್ತಿ ದರ್ಪಣ, ವಾಚನ: ಕುಮಾರಿ ಧನ್ಯ
ವ್ಯಾಖ್ಯಾನ : ವಿದ್ವಾನ್ ಕೃಪ ಮಂಜುನಾಥ್,
ಸಂಜೆ 6.45ಕ್ಕೆ ಗಾಯನ/6:45 P.M. Vocal

ವಿದುಷಿ ಸಂಗೀತಾ ಕಟ್ಟಿ – ಗಾಯನ
ಪಂಡಿತ್ ಸತೀಶ್ ಕೊಲ್ಲಿ – ಹಾರ್ಮೋನಿಯಂ
ವಿದ್ವಾನ್ ಕೇಶವ್ ಜೋಶಿ – ತಬಲಾ

**Vid Sangeetha Katti - Hindustani Vocal**
**Vid Satish Kolli - Harmonium**
**Vid Keshav Joshi – Tabla**



**ವಿದುಷಿ ಸ್ಫೂರ್ತಿ ರಾವ್**

ಕರ್ನಾಟಕ ಸಂಗೀತದ ಉದಯೋನ್ಮುಖ ತಾರೆಯರಲ್ಲಿ ವಿದುಷಿ ಸ್ಫೂರ್ತಿ ರಾವ್ ಇಂದು ಮುಂಚೂಣಿಯ ಕಲಾವಿದೆ. ತಾಯಿ ಸಿಂಧೂ ರಾವ್ ಅವರ ಮೊದಲ ಗುರು. ಬಾಲಪ್ರತಿಭೆಯಾಗಿ ಹೊರಹೊಮ್ಮಿದ ಸ್ಫೂರ್ತಿ ಏರ್‌ಟೆಲ್ ಸೂಪರ್‌ಸಿಂಗರ್ ಜ್ಯೂನಿಯರ್ ಸ್ಪರ್ಧೆಗಳಲ್ಲಿ ಗೆಲುವು ಗಳಿಸಿದ ನಂತರ ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತಾ ಹೋದರು. ನಂತರ ಎಸ್ ಪಿ ಬಾಲಸುಬ್ರಮಣ್ಯಂ, ಶಂಕರ್ ಮಹಾದೇವನ್, ಕೆ ಎಸ್ ಚಿತ್ರಾ ಮುಂತಾದ ಖ್ಯಾತನಾಮರ ಜೊತೆ ಗಾಯನದ ಅನುಭವ. ಜೊತೆಯಲ್ಲಿಯೇ ಪಂಡಿತ್ ನರಹರಿ ದೀಕ್ಷಿತ್, ಪಂಡಿತ್ ರಾಜಗೋಪಾಲ್ ಕಲ್ಲೂರ್‌ಕರ್ ಅವರಲ್ಲಿ ಸಂಗೀತ ಕಲಿಕೆಯ ಮುಂದುವರಿಕೆ. ಈಗ ತಮ್ಮ ಕಲಿಕೆಯನ್ನು ವಿದುಷಿಯರಾದ ರಂಜನಿ ಹಾಗೂ ಗಾಯತ್ರಿಯವರಲ್ಲಿ ಮುಂದುವರಿಸುತ್ತಿದ್ದಾರೆ. ಇವರಿಗೆ ವಯೋಲಿನ್ನಿನಲ್ಲಿ ವಿದುಷಿ ಹೆಚ್.ಎನ್. ಭಾಸ್ಕರ್, ಮೃದಂಗದಲ್ಲಿ ವಿದ್ವಾನ್ ಅದಮ್ಯ ರಾಮಾನಂದ, ಘಟಂನಲ್ಲಿ ವಿದ್ವಾನ್ ಶಮಿತ್‌ಗೌಡ ಸಹಕರಿಸುತ್ತಿದ್ದಾರೆ.





**ವಿದುಷಿ ಸಂಗೀತಾ ಕಟ್ಟಿ**

ವಿದುಷಿ ಸಂಗೀತಾ ಕಟ್ಟಿ ಬಹುಮುಖ ಪ್ರತಿಭೆಯ ಕಲಾವಿದೆ. ಬಾಲಪ್ರತಿಭೆಯಾಗಿ ತಮ್ಮ ನಾಲ್ಕನೆಯ ವರ್ಷದಲ್ಲೇ ಕಚೇರಿ ಮಾಡಿದ ಇವರಿಗೆ ತಂದೆ ಎಚ್ ಎ ಕಟ್ಟಿಯವರು ಮೊದಲ ಗುರು. ನಂತರ ನೌಷದ್ ಅಲಿ ಅವರಲ್ಲಿ ಕಲಿತು, ನಂತರ ಪಂಡಿತರಾದ ಚಂದ್ರಶೇಖರ ಪುರಾಣಿಕ್‌ಮಠ್, ಬಸವರಾಜ ರಾಜಗುರು ಅವರಲ್ಲಿ, ಕಲಿತು ವಿದುಷಿ ಕಿಶೋರಿ ಅಮೋಣ್ಕರ್ ಅವರಲ್ಲಿ ಕಲಿಕೆ ಮುಂದುವರಿಸಿದರು. ಹಲವು ಚಲನಚಿತ್ರ ಸಂಗೀತ ನಿರ್ದೇಶಕರಾದ ಎಂ ರಂಗರಾವ್, ವಿಜಯಭಾಸ್ಕರ್, ಕೀರವಾಣಿ ಮುಂತಾದವರೊಡನೆ ಕೆಲಸ ಮಾಡಿದ್ದಾರೆ. ಹಲವು ಚಲನಚಿತ್ರಗಳಲ್ಲಿ ಹಾಡಿದ್ದಾರೆ. ವಿಶ್ವದ ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ಗಾಯನವನ್ನು ಪ್ರಸ್ತುತ ಪಡಿಸಿದ್ದಾರೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳು ಶ್ರೀಯುತರಿಗೆ ಸಂದಿವೆ.
ಇವರಿಗೆ ಹಾರ್ಮೋನಿಯಂನಲ್ಲಿ ಪಂಡಿತ್ ಸತೀಶ್‌ಕೊಲ್ಲಿ, ತಬಲಾದಲ್ಲಿ ಪಂಡಿತ್ ಕೇಶವ್ ಜೋಶಿ ಸಹಕರಿಸುತ್ತಿದ್ದಾರೆ.

## ಸೆಪ್ಟೆಂಬರ್ ಭಾನುವಾರ 15 September Sunday

ಬೆಳಗ್ಗೆ 8 ಗಂಟೆಗೆ ಶ್ರೀ ಗಣಪತಿ ಮತ್ತು
ಶ್ರೀ ಭೂ ಸೂಕ್ತ ಹೋಮ
ವೇದ ವಿದ್ಯಾಂಸರಾದ ಚೆಳ್ಳಕೆರೆ ಸಹೋದರರಿಂದ



ಶ್ರೀ ಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ್ಯ ಪರಕಾಲ ಸ್ವಾಮೀಜಿ ರವರ
ದಿವ್ಯ ಸಾನಿಧ್ಯದಲ್ಲಿ ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ

ಗಮಕ: ಸಂಜೆ 5.30 ರಿಂದ 6.45
ಕಾವ್ಯ : ಕನ್ನಡ ಭಾಗವತ
ವಾಚನ: ವಿದುಷಿ ಸ್ವಾತಿ ಡಿ.ಎನ್. : ವ್ಯಾಖ್ಯಾನ : ಶ್ರೀ ಶ್ರೀನಿವಾಸ ಫಣಿ

**ಸಂಜೆ 6.45ಕ್ಕೆ ಕೊಳಲು/6:45 P.M. Flute**

ವಿದ್ವಾನ್ ಶ್ರುತಿಸಾಗರ್ – ವೇಣುವಾದನ
ವಿದುಷಿ ಚಾರುಮತಿ ರಘುರಾಮನ್ – ವಯೋಲಿನ್
ವಿದ್ವಾನ್ ಅನಂತ್ ಕೃಷ್ಣನ್ – ಮೃದಂಗ
ವಿದ್ವಾನ್ ವಾಜಪಳ್ಳಿ ಕೃಷ್ಣಕುಮಾರ್ – ಘಟಂ

**Vid Sruthi Sagar - Flute**
**Vid Charumathi Raghuraman - Violin**
**Vid Ananth R Krishnan - Mridangam**
**Vid Vazhapalli Krishnakumar – Ghatam**



### ವಿದ್ವಾನ್ ಶ್ರುತಿಸಾಗರ್

ವಿದ್ವಾನ್ ಶ್ರುತಿಸಾಗರ್ ಬಾಲ ಪ್ರತಿಭೆಯಾಗಿ ಸಂಗೀತಲೋಕಕ್ಕೆ ಕಾಲಿಟ್ಟರು. ವಿದ್ವಾನ್ ಬಾಲ ಸಾಯಿ ಅವರಲ್ಲಿ ಶಿಕ್ಷಣ ಪ್ರಾರಂಭಿಸಿ ವಿದ್ವಾನ್ ಎಸ್ ಸುಂದರ್ ಅವರಲ್ಲಿ ಮುಂದುವರಿಸಿದರು. ತಮ್ಮ ಗಾಯಕಿ ಶೈಲಿಗೆ ಮತ್ತು ಐದು ಮನೆ ಶ್ರುತಿಯಲ್ಲಿ ನುಡಿಸುವುದಕ್ಕೆ ಖ್ಯಾತರಾಗಿರುವ ಇವರನ್ನು ಕೊಳಲು ಮಾಂತ್ರಿಕ ಮಾಲಿಗೆ ಕೆಲವರು ಹೋಲಿಸುತ್ತಾರೆ. ಅತ್ಯಂತ ಬೇಡಿಕೆಯ ಕಲಾವಿದರಾದ ಶ್ರುತಿಸಾಗರ್ ಎಲ್ಲಾ ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ನುಡಿಸಿದ್ದಾರೆ. ಮುಂಬೈ ಷಣ್ಮುಗಾನಂದ ಸಭೆಯವರು ಕೊಡಮಾಡುವ ಎಂ ಎಸ್ ಸುಬ್ಬುಲಕ್ಷ್ಮೀ ಫೆಲೋಷಿಪ್ ಪಡೆದಿದ್ದಾರೆ. ಖ್ಯಾತ ನರ್ತಕಿಯರಾದ ವೈಜಯಂತಿಮಾಲಾ, ಅಲರ್‌ಮೇಲ್‌ವಲ್ಲಿ, ಊರ್ಮಿಳಾ ಸತ್ಯನಾರಾಯಣ ಇವರ ನೃತ್ಯಕ್ಕೆ ನುಡಿಸಿರುವ ಅನುಭವವೂ ಇವರದು. 2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಇಂಡಿಯನ್ ಬ್ಯಾಂಡ್‌ನ ಭಾಗವಾಗಿ ನುಡಿಸಿರುವ ಹೆಗ್ಗಳಿಕೆ ಇವರದು. ಇವರಿಗೆ ವಯೋಲಿನ್ನಿನಲ್ಲಿ ವಿದುಷಿ ಚಾರುಮತಿ ರಘುರಾಮನ್, ಮೃದಂಗದಲ್ಲಿ ವಿದ್ವಾನ್ ಅನಂತ್ ಕೃಷ್ಣನ್ ಘಟಂನಲ್ಲಿ ವಿದ್ವಾನ್ ವಾಜಪಳ್ಳಿ ಕೃಷ್ಣಕುಮಾರ್ ಸಹಕರಿಸುತ್ತಿದ್ದಾರೆ.

## ಸೆಪ್ಟೆಂಬರ್ ಸೋಮವಾರ 16 September Monday

ಗಮಕ ಸಂಜೆ 5.30 ರಿಂದ 6.45
ಕಾವ್ಯ : ಶಿವತತ್ವ ಚಿಂತಾಮಣಿ
ವಾಚನ: ವಿದುಷಿ ಭಾಗ್ಯಲಕ್ಷ್ಮಿ ಕೆ.ಎಸ್. : ವ್ಯಾಖ್ಯಾನ : ಶ್ರೀ ಮೊರಬದ ಮಲ್ಲಿಕಾರ್ಜುನ

**ಸಂಜೆ 6.45ಕ್ಕೆ ಗಾಯನ/6:45 P.M. Vocal**

ವಿದ್ವಾನ್ ಕುನ್ನಕ್ಕುಡಿ ಬಾಲಮುರಳಿಕೃಷ್ಣ – ಗಾಯನ
ವಿದುಷಿ ಅಕ್ಕರೈ ಶುಭಲಕ್ಷ್ಮೀ – ವಯೋಲಿನ್
ವಿದ್ವಾನ್ ಶ್ರೀ ಸುಂದರ್‌ಕುಮಾರ್ – ಮೃದಂಗ
ವಿದ್ವಾನ್ ಗುರುಪ್ರಸನ್ನ – ಖಂಜಿರಾ

**Vid Kunnakudi Balamuralikrishna - Vocal**
**Vid Akkarai Subhulakshmi - Violin**
**Vid Shree Sundarkumar - Mridangam**
**Vid Guruprasanna –Kanjira**



### ವಿದ್ವಾನ್ ಕುನ್ನಕ್ಕುಡಿ ಬಾಲಮುರಳಿಕೃಷ್ಣ

ವಿದ್ವಾನ್ ಕುನ್ನಕ್ಕುಡಿ ಬಾಲಮುರಳಿಕೃಷ್ಣ ತಮ್ಮ ಪ್ರಾರಂಭಿಕ ಶಿಕ್ಷಣವನ್ನು ತಂದೆ ಮೀನಾಕ್ಷಿ ಸುಂದರಂ ಅವರಲ್ಲಿ ಪಡೆದರು. ನಂತರ ವಿದ್ವಾನ್ ನೈವೇಲಿ ಸಂತಾನಗೋಪಾಲನ್ ಹಾಗೂ ವಿದ್ವಾನ್ ವಿ ಸುಂದರೇಷನ್ ಅವರಲ್ಲಿ ಮುಂದುವರಿಸಿದರು. ಮುಂದೆ ಪದ್ಮಭೂಷಣ ಪಿ ಎಸ್ ನಾರಾಯಣಸ್ವಾಮಿಯವರಲ್ಲಿ 14 ವರ್ಷ ಸಂಗೀತ ಕಲಿತರು. ಕಾರೈಕ್ಕುಡಿ ಮಣಿ ಅವರಲ್ಲಿ ಮೃದಂಗವನ್ನೂ ಕಲಿತಿದ್ದಾರೆ. ಸಂಪ್ರದಾಯದ ಚೌಕಟ್ಟಿನಲ್ಲಿಯೇ ಹೊಸತನ್ನು ಅರಸುತ್ತಾ, ಒಂದು ವೈಯಕ್ತಿಕವಾದ ಶೈಲಿಯನ್ನು ರೂಢಿಸಿಕೊಂಡು ತಮ್ಮ ಛಾಪು ಮೂಡಿಸಿದ್ದಾರೆ. ಅವರ ಲಯಜ್ಞಾನ ಅವರ ಗಾಯನಕ್ಕೆ ಒಂದು ವಿಶೇಷ ಮೆರುಗು ನೀಡಿದೆ. ಇವರಿಗೆ ವಯೋಲಿನ್ನಿನಲ್ಲಿ ವಿದುಷಿ ಅಕ್ಕರೈ ಶುಭಲಕ್ಷ್ಮೀ, ಮೃದಂಗದಲ್ಲಿ ವಿದ್ವಾನ್ ಶ್ರೀ ಸುಂದರ್‌ಕುಮಾರ್, ಖಂಜಿರಾದಲ್ಲಿ ವಿದ್ವಾನ್ ಗುರುಪ್ರಸನ್ನ ಸಹಕರಿಸುತ್ತಿದ್ದಾರೆ.

**ಸೆಪ್ಟೆಂಬರ್ ಮಂಗಳವಾರ**

# 17

**September Tueday**

ಸಂಜೆ 5.30 ರಿಂದ 6.30 ರವರೆಗೆ
ವಿದ್ವಾನ್ ಕಿರಗಾಸೂರು ರಾಜಪ್ಪ ಮತ್ತು ತಂಡದವರಿಂದ –ರಂಗಗೀತೆಗಳು

ಸಂಜೆ 6.45ಕ್ಕೆ ದ್ವಂದ್ವ ವಯೋಲಿನ್ ವಾದನ/ 6:45 P.M. - Violin Duet

ವಿದುಷಿ ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣಲತಾ – ದ್ವಂದ್ವ ವಯೋಲಿನ್‌ವಾದನ
ವಿದ್ವಾನ್ ಸುಮೇಶ್ ನಾರಾಯಣನ್ – ಮೃದಂಗ
ವಿದ್ವಾನ್ ಶ್ರೀ ಸುಂದರ್‌ಕುಮಾರ್ – ಖಂಜಿರಾ

**Vid Akkarai Sisters Violin Duet**
**(Akkarai Subhulakshmi / Akkarai Sornalatha)**
**Vid Sumesh Narayanan - Mridangam**
**Vid Shree Sundarkumar - Khanjeera**

**ಸೆಪ್ಟೆಂಬರ್ ಬುಧವಾರ**

# 18

**September Wednesday**

ಸಂಜೆ 5.00 ರಿಂದ 6.00
ಪಂಡಿತ್ ಭೀಮಾಶಂಕರ ಬಿದನೂರ ಮತ್ತು ವಿದ್ಯಾರ್ಥಿಗಳ ಸಮೂಹ ತಬಲ
ಸಂಜೆ 6.00 ರಿಂದ 6.30
ಸಂಗೀತ ಕಲಾನಿಧಿ–2024 ಪ್ರಶಸ್ತಿಗೆ ಆಯ್ಕೆಯಾಗಿರುವ ವಿದ್ವಾನ್ ಟಿ.ಎಂ.ಕೃಷ್ಣ ರವರಿಗೆ ಸನ್ಮಾನ ಸಮಾರಂಭ
ಸಂಜೆ 6.45ಕ್ಕೆ ಗಾಯನ/6:45 P.M. Vocal

ವಿದ್ವಾನ್ ಟಿ ಎಂ ಕೃಷ್ಣ – ಗಾಯನ
ವಿದುಷಿ ಅಕ್ಕರೈ ಶುಭಲಕ್ಷ್ಮೀ – ವಯೋಲಿನ್
ವಿದ್ವಾನ್ ಸುಮೇಶ್ ನಾರಾಯಣ್ – ಮೃದಂಗ
ವಿದುಷಿ ಸುಕನ್ಯಾ ರಾಮಗೋಪಾಲ್ – ಘಟ

**Vid T.M. Krishna - Vocal**
**Vid Akkarai Subhulakshmi - Violin**
**Vid Sumesh Narayanan - Mridangam**
**Vid Sukanya Ramgopal - Ghatam**



### ವಿದುಷಿ ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣಲತಾ

ವಿದುಷಿ ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣಲತಾ ಸಂಗೀತ ಕುಟುಂಬಕ್ಕೆ ಸೇರಿದವರು. ಅಜ್ಜಿ ಆರ್ ಸ್ವರ್ಣಾಂಬಾಳ್ ಹರಿಕಥಾ ಕಲಾವಿದೆ. ತಂದೆ ಸ್ವಾಮಿನಾಥನ್ ಕೂಡ ನುರಿತ ವಯೋಲಿನ್‌ವಾದಕರು. ತಂದೆಯಲ್ಲಿ ಕಲಿಕೆ ಪ್ರಾರಂಭಿಸಿ ನಂತರ ವಿದ್ವಾಂಸರಾದ ವಿ ಜಾನಕೀರಾಮನ್, ಓ ವಿ ಸುಬ್ರಮಣಿಯನ್, ಪಿ ಎಸ್ ನಾರಾಯಣಸ್ವಾಮಿ, ಮತ್ತು ಚಿತ್ರವೀಣಾ ರವಿಕಿರಣ್ ಅವರಲ್ಲಿ ಸಂಗೀತ ಅಭ್ಯಾಸ ಮುಂದುವರಿಸಿದರು. ಗಾಯನ ಮತ್ತು ವಾದನಗಳೆರಡಲ್ಲೂ ಪರಿಣತಿ ಪಡೆದಿದ್ದಾರೆ. ತಮ್ಮ ವಯೋಲಿನ್ ವಾದನದಲ್ಲಿ ವಿಶಿಷ್ಟ ನಾದಗುಣದಿಂದಾಗಿ ಮತ್ತು ಪರಿಪೂರ್ಣ ಗಾಯನ ಶೈಲಿಯಿಂದ ತಮ್ಮದೇ ಆದ ಗುರುತನ್ನು ಸಂಗೀತ ಪ್ರಪಂಚದಲ್ಲಿ ಮೂಡಿಸಿದ್ದಾರೆ. ಇವರಿಗೆ ಮೃದಂಗದಲ್ಲಿ ವಿದ್ವಾನ್ ಸುಮೇಶ್ ನಾರಾಯಣನ್, ಖಂಜಿರಾದಲ್ಲಿ ವಿದ್ವಾನ್ ಶ್ರೀ ಸುಂದರ್‌ಕುಮಾರ್ ಸಹಕರಿಸುತ್ತಿದ್ದಾರೆ.



### ವಿದ್ವಾನ್ ಟಿ ಎಂ ಕೃಷ್ಣ

ವಿದ್ವಾನ್ ಟಿ ಎಂ ಕೃಷ್ಣ ಕೇವಲ ಶ್ರೇಷ್ಠಮಟ್ಟದ ಸಂಗೀತಗಾರಷ್ಟೇ ಅಲ್ಲ. ಸಂಗೀತವನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿ ಅತ್ಯಂತ ಮೌಲಿಕವಾದ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ವಿದ್ವಾನ್ ಸೀತಾರಾಮ ಶರ್ಮ ಅವರಲ್ಲಿ ಸಂಗೀತಾಭ್ಯಾಸ ಪ್ರಾರಂಭಿಸಿ, ನಂತರ ರಾಗ–ತಾನ–ಪಲ್ಲವಿ ಕುರಿತಂತೆ ವಿದ್ವಾನ್ ಚೆಂಗಲ್‌ಪೇಟ್ ರಂಗನಾಥನ್ ಅವರಲ್ಲಿ ತರಬೇತಿ ಪಡೆದರು. ವಿದ್ವಾನ್ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರಲ್ಲಿ ಉನ್ನತ ಶಿಕ್ಷಣ ಪಡೆದರು. ಸಂಗೀತ ಪ್ರಸ್ತುತಿಯಲ್ಲಿ ತಮ್ಮದೇ ಶೈಲಿಯನ್ನು ರೂಢಿಸಿಕೊಂಡಿರುವ ಕೃಷ್ಣ ಅವರು ಖ್ಯಾತ ಲೇಖಕರೂ ಕೂಡ. ಅವರ ಸದರನ್ ಮ್ಯೂಸಿಕ್, ಸೆಬಾಸ್ಟಿಯನ್ ಅಂಡ್ ಸನ್ಸ್ ಇತ್ಯಾದಿ ಕೃತಿಗಳು ಸಂಗೀತ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಒತ್ತಿವೆ. ರಾಮೋನ್ ಮ್ಯಾಗ್ಸೇಸೇ ಪ್ರಶಸ್ತಿಯೂ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಎಲ್ಲದಕ್ಕೂ ಮುಕುಟವಿಟ್ಟಂತೆ ಈಗ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಸಂಗೀತ ಕಲಾನಿಧಿ ಪುರಸ್ಕಾರ ಅವರ ಮುಡಿಗೇರಿದೆ. ಇವರಿಗೆ ವಯೋಲಿನ್ನಿನಲ್ಲಿ ವಿದುಷಿ ಅಕ್ಕರೈ ಶುಭಲಕ್ಷ್ಮೀ, ಮೃದಂಗದಲ್ಲಿ ವಿದ್ವಾನ್ ಶ್ರೀ ಸುಮೇಶ್ ನಾರಾಯಣನ್, ಘಟಂನಲ್ಲಿ ವಿದುಷಿ ಸುಕನ್ಯಾ ರಾಮಗೋಪಾಲ್ ಸಹಕರಿಸುತ್ತಿದ್ದಾರೆ.